# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಚನ್ನಗಿರಿ.

**ಸಿ.ಸಿಃ 20/2025 DW-1**

| | |
|---|---|
| ಸಾಕ್ಷಿದಾರರ ಹೆಸರು | ಸುಧಾ |
| ಗಂಡನ ಹೆಸರು | ಶ್ರೀಕಾಂತ್ ಜಿ |
| ವಯಸ್ಸು | 40 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಹುಲುಕೋಡು ಗ್ರಾಮ, ಸಾಗರ ತಾಲ್ಲೂಕು. |
| ದಿನಾಂಕ | 15.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

## ಮುಖ್ಯ ವಿಚಾರಣೆಃ ಆರೋಪಿ ಪರ ಶ್ರಿಮತಿ ಕೆ ಎಸ್ ಕೆ ವಕೀಲರಿಂದಃ

ನನಗೆ ಈ ಪ್ರಕರಣದ ಪಿರ್ಯಾದುದಾರರ ಪರಿಚಯ ಇಲ್ಲ. ನನಗೆ ಅವರು ಯಾರು ಎಂದು ತಿಳಿದಿರುವುದಿಲ್ಲ. ನಾನು ಪಿರ್ಯಾದುದಾರರನ್ನು ಮೊದಲ ಬಾರಿಗೆ ದಿನಾಂಕ 02.08.2025 ರಂದು ಈ ನ್ಯಾಯಾಲಯದ ಮುಂದೆ ನೋಡಿದ್ದೆ. ನಾನು ಪಿರ್ಯಾದುದಾರರ ಬಳಿ ಯಾವುದೇ ಹಣವನ್ನು ಕೇಳಿರಲಿಲ್ಲ. ನಾನು ನನ್ನ ಗೃಹಕೃತ್ಯ ಮತ್ತು ವೈಯಕ್ತಿಕ ವ್ಯವಹಾರಕ್ಕೆಂದು ಪಿರ್ಯಾದುದಾರರ ಬಳಿ 2024 ರ ಮಾರ್ಚ ಮೊದಲ ವಾರದಲ್ಲಿ 6 ಲಕ್ಷ ಹಣವನ್ನು ಸಾಲವಾಗಿ ಪಡೆದಿಲ್ಲ. ನನಗೆ ಯಾವುದೇ ಗೃಹಕೃತ್ಯದ ಅಡಚಣೆ ಇರಲಿಲ್ಲ. ಅದೇ ರೀತಿ ನಾನು ಯಾವುದೇ ವ್ಯವಹಾರವನ್ನು ಸಹ ಮಾಡುತ್ತಿರಲಿಲ್ಲ. ನಾನು ಪಿರ್ಯಾದುದಾರರಿಗೆ ಆ ಹಣವನ್ನು 6 ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿಯೂ ಸಹ ಹೇಳಿಲ್ಲ. ನಾನು ಪಿರ್ಯಾದುದಾರರಿಗೆ ಹಣದ ಮರುಪಾವತಿಗಾಗಿ ಈ ಪ್ರಕರಣದ ಪ್ರಶ್ನಿತ ಚೆಕ್ಕನ್ನು ನೀಡಿರುವುದಿಲ್ಲ. ನನಗೆ ಈ ಪ್ರಕರಣದಲ್ಲಿ ನೋಟೀಸ್ ಬಂದ ನಂತರ ನಾನು ನನ್ನ ಗಂಡನನು ವಿಚಾರಿಸಿದಾಗ ಅವರು ವಿಶ್ವಂ ಫೈನಾನ್ಸನವರು ನಿನ್ನ ಖಾಲಿ ಚೆಕ್ಕನ್ನು ಪಡೆದಿದ್ದರು ಎಂದು ಹೇಳಿದ್ದರು. ನಂತರ ನಾನು ಮತ್ತು ನನ್ನ ಸಹೋದರಿ ಕೂಡಿಕೊಂಡು ವಿಶ್ವಂ ಫೈನಾನ್ಸಗೆ ಹೋಗಿ ನನ್ನ ಚೆಕ್ಕನ್ನು ಮರಳಿಸುವಂತೆ ಕೇಳಿದಾಗ ಅವರು ಮಂಜುನಾಥ ಎನ್ನುವ ಇನ್ನೊಬ್ಬ ಪಾಲುದಾರರ ಬಳಿ ಇರುತ್ತದೆ ಎಂದು ಹೇಳಿದ್ದರು. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿ ಮತ್ತು ಬರವಣಿಗೆ ನನ್ನದು ಇರುವುದಿಲ್ಲ. ಸದರಿ ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿ ಮತ್ತು ಬರವಣಿಗೆಯನ್ನು ಪಿರ್ಯಾದುದಾರರೇ ಮಾಡಿಕೊಂಡಿರುತ್ತಾರೆ. ವಿಶ್ವಂ ಫೈನಾನ್ಸನವರು ನನ್ನ ಗಂಡನ ವಿರುದ್ದ ಸಾಗರದ ನ್ಯಾಯಾಲಯದಲ್ಲಿ 8 ಲಕ್ಷ ಹಣಕ್ಕೆ ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ. ನನಗೂ, ವಿಶ್ವಂ ಫೈನಾನ್ಸ ನವರಿಗೂ ಮತ್ತು ಈ ಪ್ರಕರಣದ ಪಿರ್ಯಾದುದಾರರ ನಡುವೆ ಯಾವುದೇ ವ್ಯವಹಾರ ನಡೆಯದೇ ಇದ್ದರು ಸಹ ಸದರಿ ವಿಷಯ ಪಿರ್ಯಾದುದಾರರಿಗೆ ತಿಳಿದಿದ್ದರು ಸಹ ನನ್ನ ಚೆಕ್ಕನ್ನು ದುರುಪಯೋಗ ಮಾಡಿಕೊಂಡು ನನ್ನ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಅದೇ ರೀತಿ ಪಿರ್ಯಾದುದಾರರು ನನ್ನ ಕಡೆಯಿಂದ ಅಕ್ರಮ ಹಣ ಗಳಿಸುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ನಾನು

ಪಿರ್ಯಾದುದಾರರ ಕಡೆಯಿಂದ ಯಾವುದೇ ಹಣವನ್ನು ಪಡೆಯದ ಕಾರಣ ನಾನು ಅವರಿಗೆ ಯಾವುದೇ ಹಣವನ್ನು ಮರಳಿಸುವುದು ಇರುವುದಿಲ್ಲ. ಆದ್ದರಿಂದ ದೂರನ್ನು ವಜಾ ಮಾಡಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಆರೋಪಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**